**ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಶಹಬಾದ**

**CC No: 166/2020**

| | | |
|---|---|---|
| CW : 4 | | PW: 2 |
| ಹೆಸರು | : | ಅಜರ್ |
| ತಂದೆಯ ಹೆಸರು | : | ಹಸಮುದ್ದಿನ್ |
| ವಯಸ್ಸು | : | 32 ವರ್ಷ |
| ಉದ್ಯೋಗ | : | ವ್ಯಾಪಾರ |
| ಸ್ಥಳ | : | ಶಹಾಬಾದ |

**(ದಿನಾಂಕ: 07-03-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)**

**ಮುಖ್ಯ ವಿಚಾರಣೆ: ಸ.ಸ.ಅ ವಕೀಲರಿಂದ**

ನನಗೆ ಆರೋಪಿತನ ಪರಿಚಯ ಇರುತ್ತದೆ. ಚಾಸಾ-5 ಮತ್ತು 1 ರವರ ಪರಿಚಯ ಇರುತ್ತದೆ. ಚಾಸಾ-6 ರವರ ಪರಿಚಯ ಇರುವುದಿಲ್ಲ. ದಿಃ 09-10-2016 ರಂದು ಅಂದಾಜು 01-00 ರಿಂದ 02-00 ಗಂಟೆಯ ಅವಧಿಯಲ್ಲಿ ನನ್ನ ಸ್ನೇಹಿತನ ಮೊಬೈನಲ್ಲಿ ಪೇಸಬುಕ್ ನೋಡುತ್ತಿದ್ದಾಗ ಅದರಲ್ಲಿ ಮಕ್ಕಾ ಮದಿನಾದಲ್ಲಿ ಇರುವ ಮಕ್ಕಾ ಶರೀಫ್ ಮೇಲೆ ರಾಮ ಬಿಲ್ ಹಿಡಿದು ನಿಂತಿರುವ ಪೋಟೋ ಬೆಳಿಗ್ಗೆ 09-00 ರಿಂದ 10-00 ಗಂಟೆಗೆ ಅಪಲೋಡ್ ಮಾಡಿದ್ದು ಇತ್ತು. ನನ್ನ ಸ್ನೇಹಿತನ ಮೋಬೈನ್ ನಂಃ 9886236435 ಇರುತ್ತದೆ. ಅದು ಮೈಕ್ರೊಮ್ಯಾಕ್ಸ ಮೋಬೈಲ್ ನಂಬರ್ ಇರುತ್ತದೆ. ಅದರ ನಂಬರ್ ನನಗೆ ಗೊತ್ತಿರುವುದಿಲ್ಲ. ಅದು ಯಾರಿಗೆ ಸಂಬಂಧಿಸಿದ್ದು ಎಂದು ನನಗೆ ಗೊತ್ತಿರುವುದಿಲ್ಲ. ಸದರಿ ಮಾಹಿತಿಯನ್ನು ನಾನು ಚಾಸಾ-1 ರವರಿಗೆ ಪೇಸಬುಕ ಪೋಟೋವಿನ ಛಾಯಾ ಚಿತ್ರ ಹಾಗೂ ಸ್ಕ್ರಿನ್ಶಾಟನ್ನು ಪ್ರಿಂಟನ್ನು ತೆಗೆದುಕೊಟ್ಟಿರುತ್ತೇನೆ. ನಾನು ಪೊಲೀಸರಿಗೆ ಈ ಕುರಿತು ಹೇಳಿಕೆ ನೀಡಿರುತ್ತೇನೆ. ಸದರಿ ಸಂಗತಿಯು ಮುಸ್ಲಿಂ ಧರ್ಮದ ಭಾವನೆಗಳಿಗೆ ದಕ್ಕೆ ಉಂಟಾಗಿರುವುದರಿಂದ ಮತ್ತು ಕೋಮು ಭಾವನೆ ತೇರಳಿಸುವ ಉದ್ದೇಶದಿಂದ ಆದ ಘಟನೆ ಇರುವ ಕಾರಣ ಪೊಲೀಸರಿಗೆ ಮಾಹಿತಿ ನೀಡಿರುತ್ತೇನೆ. ಸಾಕ್ಷಿಯು ಸದರಿ ಛಾಯಾ ಚಿತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-3 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸ.ಸ. ಅಭಿಯೋಜಕರ ಕೋರಿಕೆಯ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲಾಯಿತು)**

**ಪಾಟೀ ಸವಾಲು: ಸ.ಸ. ಅಭೀಯೋಜಕರಿಂದ**

ದಿಃ 09-10-2016 ರಂದು ನಾನು ಹಾಗೂ ಚಾಸಾ-5 ರವರು ನಮ್ಮ ಮನೆಯ ಹತ್ತಿರ ಮಧ್ಯಾಹ್ನ 01-15 ಕ್ಕೆ ಚಾಸಾ-5 ರವರ ಮೋಬೈಲ್‌ನಲ್ಲಿ ಪೇಸಬುಕ್ ಐಡಿ ನೋಡುತ್ತಿರುವಾಗ ಶಿವಕುಮಾರ ಇತನು ತನ್ನ ಮೊಬೈಲ್ ನಂಃ 9632243112 ನೇದ್ದರಲ್ಲಿ ಸದರಿ ಪೋಟೋವನ್ನು ಅಪಲೋಡ್ ಮಾಡಿರುತಾತನೆ ಅಂದರೆ ಸರಿ. ಅದು ಅಂದಾಜು 11-37 ಗಂಟೆಗೆ ಅಪಲೋಡ್ ಮಾಡಿರುತ್ತಾನೆ ಅಂತಾ ಹೇಳಿಕೆ ನೀಡಿರುತ್ತೇನೆ ಅಂದರೆ ಸರಿ.

**CC No: 166/2020**
CW : 4 PW: 2

**<u>ಪಾಟೀ ಸವಾಲು: ಶ್ರೀ</u> ಎನ್. ಪಿ. ಡಿ ಆರೋಪಿ ಪರ ವಕೀಲರು ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಿ ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೆ. ಸರಿ ಇದೆ.**
**-Sd-**
**ಸಿವಿಲ್ ಹಾಗೂ ಜೆ.ಎಮ್.ಎಫ್.ಸಿ.**
**ನ್ಯಾಯಾಧೀಶರು, ಶಹಬಾದ.**